ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮಪಂಚಾಯಿತಿ ಕಾರ್ಯದರ್ಶಿ – ಗ್ರೇಡ್-1:

ಹುದ್ದೆಗಳ ಆಯ್ಕೆ – ನೇರ ನೇಮಕಾತಿ

ಅಂಗವಿಕಲ ಅಭ್ಯರ್ಥಿಗಳಿಗೆ – ಮುಖ್ಯ ಸೂಚನೆಗಳು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ಹುದ್ದೆಗಳ ಆಯ್ಕೆ – ನೇರ ನೇಮಕಾತಿ ಸಂಬಂಧ, ಅಂಗವಿಕಲ ಅಭ್ಯರ್ಥಿಗಳಿಗೆ ಮಾತ್ರ (ಈಗಾಗಲೇ ವೈದ್ಯಕೀಯ ತಪಾಸಣೆಗೆ ಹಾಜರಾಗಿರುವ ಅಂಧ / ದೃಷ್ಟಿಮಾಂದ್ಯ ಅಭ್ಯರ್ಥಿಗಳನ್ನು ಹೊರತು ಪಡಿಸಿ) ದಿನಾಂಕ 05-01-2017 ರಂದು ಬೆಳಿಗ್ಗೆ 11.00 ಗಂಟೆಯಿಂದ 10-01-2017 ರ ಸಂಜೆ 5.30ರ ವರೆಗೆ ಆನ್‌ಲೈನ್ ಮೂಲಕ ಮಾಹಿತಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು.

ಶೇ.40% ಅಥವಾ ಅದಕ್ಕಿಂತಲೂ ಹೆಚ್ಚು ಅಂಗವಿಕಲತೆಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ನಿಯಮಾನುಸಾರ ಸ್ಪರ್ಧಾತ್ಮಕ ಪರೀಕ್ಷೆಗೆ ನೀಡಬಹುದಾದ ಸೌಲಭ್ಯಗಳನ್ನು ನಂತರ ತಿಳಿಸಲಾಗುವುದು. ಈ ಸವಲತ್ತನ್ನು ಪಡೆಯಬಯಸುವ ಶೇ.40% ಅಥವಾ ಅದಕ್ಕಿಂತಲೂ ಹೆಚ್ಚು ಅಂಗವಿಕಲತೆಯನ್ನು ಹೊಂದಿರುವ ಅಂಗವಿಕಲ ಅಭ್ಯರ್ಥಿಗಳು ಮಾತ್ರ ಜಿಲ್ಲಾ ಸರ್ಜನ್ ಅವರಿಂದ ಈಗಾಗಲೇ ಪಡೆದುಕೊಂಡಿರುವ ನಿಗದಿತ ವೈದ್ಯಕೀಯ ಪ್ರಮಾಣಪತ್ರವನ್ನು ಆನ್‌ಲೈನ್ ಮೂಲಕ Upload ಮಾಡಬೇಕು. ಶೇ.40% ಕ್ಕಿಂತಲೂ ಕಡಿಮೆ ಅಂಗವಿಕಲತೆಯನ್ನು ಹೊಂದಿರುವ ಅಭ್ಯರ್ಥಿಗಳು ನಿಯಮಾನುಸಾರ ಅಂಗವಿಕಲರ ಮೀಸಲಾತಿಯನ್ನು ಪಡೆಯಲು ಅರ್ಹತೆ ಇರುವುದಿಲ್ಲ.

**ಆನ್‌ಲೈನ್ ಮೂಲಕ Upload ಮಾಡುವ ಕ್ರಮ / ವಿಧಾನಗಳನ್ನು ಈ ಕೆಳಗೆ ನೀಡಲಾಗಿದೆ.**

ಕ್ರಮ: 1 ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ Uploading of PH Certificate - PDO/GPS-1 ಲಿಂಕ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು.

ಕ್ರಮ: 2 ಅಭ್ಯರ್ಥಿಗಳು ಅರ್ಜಿ ಸಂಖ್ಯೆ (Application ID) ಮತ್ತು ಜನ್ಮ ದಿನಾಂಕವನ್ನು ನಮೂದಿಸಬೇಕು. ನಂತರ 'Send OTP' button ಅನ್ನು ಒತ್ತಿರಿ. ಈಗಾಗಲೇ ಅರ್ಜಿಯಲ್ಲಿ ದಾಖಲಿಸಿರುವ ಮೊಬೈಲ್ ಸಂಖ್ಯೆಗೆ OTP ಬರುತ್ತದೆ.

ಕ್ರಮ: 3 ಅಭ್ಯರ್ಥಿಗಳು ಅದೇ OTP ಅನ್ನು ದಾಖಲಿಸಬೇಕು.

ಕ್ರಮ: 4 ಜಿಲ್ಲಾ ಸರ್ಜನ್ ಅವರಿಂದ ಪಡೆದುಕೊಂಡಿರುವ ವೈದ್ಯಕೀಯ ಪ್ರಮಾಣಪತ್ರನ್ನು PDF format ನಲ್ಲಿ ಸ್ಕ್ಯಾನ್ ಮಾಡಿ ಸಿದ್ಧಪಡಿಸಿ ಇಟ್ಟುಕೊಂಡಿರಬೇಕು.

ಕ್ರಮ: 5 ನಂತರ Choose File ಅನ್ನು ಆಯ್ಕೆ ಮಾಡಿ, PDF format ನಲ್ಲಿ ಸ್ಕ್ಯಾನ್ ಮಾಡಿದ ಜಿಲ್ಲಾ ಸರ್ಜನ್ ಅವರಿಂದ ಪಡೆದುಕೊಂಡಿರುವ ವೈದ್ಯಕೀಯ ಪ್ರಮಾಣಪತ್ರ File ಅನ್ನು ಆಯ್ಕೆ ಮಾಡಿ.

ಕ್ರಮ: 6 ನಂತರ Preview ನೋಡಿ Upload ಮಾಡಬೇಕು.

ಕಾರ್ಯನಿರ್ವಾಹಕ ನಿರ್ದೇಶಕರು

ದಿನಾಂಕ: 04-01-2017